ಮೈಸೂರ ಗಜೆಟ.

ಸರ್ಕಾರದಿಂದ ಛಾಯಿಪ್ ಆದ್ದು.

ಬೆಂಗಳೂರು, ಶನಿವಾರ ಜೂರ್ ತಾ॥ 28, ಸ್ರ್ 1890.

ಈ ಭಾಗವನ್ನು ಪ್ರತ್ಯೇಕ ಕೆರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೆಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ನೋಟಿಸ್.

ಮೈಸೂರು ಶೀಮೆಯ ಜೇಫ್ ಕೋರ್ಟಿನಲ್ಲಿ.

ಸ್ರ್ 1890ನೇ ಇಸವಿ ಮಿಸಲೇನಿಯಸ್ ಪಿ॥ ನಂ. 108.

ಅರ್ಜಿದಾರು,

ಕಿಡ್ಲಫಟ್ಟದ ಶುಭೋದಯ ಕಂಪೆನಿಗೆ ಕೇರಿದ ಮೆಂಬರುಗಳಾದ 1ನೇ ಪಡಿನಾಳು ಈರಪ್ಪ, 2ನೇ ಬಸಪ್ಪ, 3ನೇ ಕೂಚಂಣನವರ ಮುನೆಪ್ಪ, 4ನೇ ಬಳಿ ಕರಿಬಸಪ್ಪ, 5ನೇ ಗುತ್ತೆ ರುದ್ರಪ್ಪ, 6ನೇ ಗುರುಸಿದ್ದಪ್ಪ, 7ನೇ ದಾಸಪ್ಪ, 8ನೇ ಕೊಮಾರಪ್ಪ, 9ನೇ ರುದ್ರಪ್ಪ, 10ನೇ ನಂಜಪ್ಪ, 11ನೇ ಸಿದ್ದಲಿಂಗಪ್ಪ, 12ನೇ ನಾರಣಪ್ಪ, 13ನೇ ಚಿನ್ನಬಸಪ್ಪ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕಿಡ್ಲಫಟ್ಟದ ಶುಭೋದಯ ಕಂಪೆನಿಗೆ ಕೇರಿದ ಮೆಂಬರುಗಳಾದ ಮೇಲ್ಕಂಡ ಪಡಿನಾಳು ಈರಪ್ಪ ವಗ್ಯೆರೇರು ಈಗ 8—10 ತಿಂಗಳ ಲಾಗಾಯತು ಕಾಲ್ಸು ವಸೂಲು ಇಲ್ಲದೇಲೂ ಮೆಂಬರುಗಳಿಗೆ ಸಹಾಯ ಚುನಾಯಿಸದೇಲೂ ಕಂಪೆನಿ ನವ್ಕರರ ತಲಬಿಗಾಗಿ ಸಿಲ್ಕಿನಲ್ಲಿ ಇದ್ದ ಮೊಬಲಗನ್ನ ಖರ್ಚು ಹಾಕಿಕೊಳ್ಳುತ್ತಾ ಬರುವದ್ದರಿಂದ ಮೆಂಬರುಗಳಿಗೆ ಬಹಳ ನಷ್ಟ ಸಂಭವಿಸುವ ಕಾರಣ ಕಂಪೆನಿ ವ್ಯೆಡಪ್ ಮಾಡಿಸಬೇಕೆಂದು ವಗ್ಯೆರೆ ಅರ್ಜಿ ಕೊಟ್ಟು ಇರುತ್ತಾರೆ. ಇದರ ವ್ಯವಸ್ಥೆ ಬಗ್ಯೆ 1890ನೇ ಇಸವಿ ಜುಲೈ ತಿಂಗಳು 8ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ ಮಾಡಿ ಇಧೆ. ಆ ತಾರೀಖು ದಿವಿ 11 ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರೂ ಅವರೇ ಆಗಲಿ ಅವರ ತರಫ್ ವೊಖ್ತ್ಯಾರಿ ಪಡದ ಅಡ್ವೊಕೇಟರಾಗಲಿ ಕೋರ್ಟು ರೂಬರೂ ಹಾಜರಾಗಿ ಅವರವರ ಆಕ್ಷೇಪಣೆಗಳನ್ನ ತಿಳಿಯಪಡಿಸಬಹುದು.

1890ನೇ ಇಸವಿ ಮಿಸಲೇನಿಯಸ್ ಪಿಟಿಷನ್ ನಂ. 109.

ಅರ್ಜಿದಾರು,

ಕಿಡ್ಲಫಟ್ಟದ ಶ್ರೀ ನಗರೇಶ್ವರಸ್ವಾಮಿ ಪೋಷಿತ ಶ್ರೀಮ್ಮಮಹಾರಾಜಾ ಕಂಪೆನಿಗೆ ಕೇರಿದ ಮೆಂಬರುಗಳಾದ 1ನೇ ಪಡಿನಾಳು ಈರಪ್ಪ, 2ನೇ ಪಡಿನಾಳು ಬಸಪ್ಪ, 3ನೇ ಕುಚ್ಚಂಣನವರ ಮುನಿಯಪ್ಪ, 4ನೇ ಅಳೇಕ್ಯಾಟೆ ಸಿದ್ದಲಿಂಗಪ್ಪ, 5ನೇ ಗುತ್ತೆ ರುದ್ರಪ್ಪ, 6ನೇ ಬೇವಿನಮರದ ಕೊಮಾರಪ್ಪ, 7ನೇ ಪಡಿನಾಡು ಪವಾಡಪ್ಪ, 8ನೇ ನಾರಣಪ್ಪ, 9ನೇ ಚಿಕ್ಕರುದ್ರಪ್ಪ, 10ನೇ ನಂಜಪ್ಪ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಿಡ್ಲಫಟ್ಟದ ಶ್ರೀನಗರೇಶ್ವರಸ್ವಾಮಿ ಪೋಷಿತ ಶ್ರೀಮ್ಮಮಹಾರಾಜಾ ಕಂಪೆನಿ ಮೆಂಬರುಗಳಾದ ಪಡಿನಾಡು ಈರಪ್ಪ ವಗ್ಯೆರೇರು ಈಗ 8—10 ತಿಂಗಳ ಲಾಗಾಯತು ಕಾಲ್ಸು ವಸೂಲು ಇಲ್ಲದೇಲೂ ಮೆಂಬರುಗಳಿಗೆ ಸಹಾಯ ಚುನಾಯಿಸದೇಲೂ ಕಂಪೆನಿ ನವ್ಕರರ ತಲಬಿಗಾಗಿ ಸಿಲ್ಕಿನಲ್ಲಿ ಇದ್ದ ಮೊಬಲಗನ್ನ ಖರ್ಚು ಹಾಕಿಕೊಳ್ಳುತ್ತಾ ಬರುವದ್ದರಿಂದ ಮೆಂಬರುಗಳಿಗೆ ಬಹಳ ನಷ್ಟ ಸಂಭವಿಸುವ ಕಾರಣ ಕಂಪೆನಿ ವ್ಯೆಡಪ್ ಮಾಡಿಸಬೇಕೆಂದು ವಗ್ಯೆರೆ ಅರ್ಜಿ ಕೊಟ್ಟು ಇರುತ್ತಾರೆ. ಇದರ ವ್ಯವಸ್ಥೆ ಬಗ್ಯೆ 1890ನೇ ಇಸವಿ ಜುಲೈ ತಿಂಗಳು 8ನೇ ತಾರೀಖು ಗುರುವಾರ ಹಿಯರಿಂಗ್ ಮೊಕರರ್ ಮಾಡಿದೆ. ಆ ತಾರೀಖು ದಿವಿ 11 ಘಂಟೆಗೆ ಆಕ್ಷೇಪಣೆ ಇರತಕ್ಕವರೆಲ್ಲರೂ. ಅವರೇ ಆಗಲಿ ಅವರ ತರಫ್ ವೊಖ್ತ್ಯಾರಿ ವಹಿಸಿದ ಅಡ್ವೊಕೇಟರಾಗಲಿ ಈ ಕೋರ್ಟು ರೂಬರೂ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಯಪಡಿಸಬಹುದು.

ತಾರೀಖು 20ನೇ ಮಾಹೆ ಜೂರ್ 1890ನೇ ಇಸವಿ.

424

1890ನೇ ಇಸವಿ ಮಿಸಲನಿಯಸ್ ಪಿಟಿಷ್ನ್ ನಂ. 118.

ಅರ್ಜಿದಾರ್ರು

ಮುಳಬಾಗಲ್ ತಾಲ್ಲೂಕು ಯಲ್ದೂರು ಕೋದಂಡರಾಮಸ್ವಾಮಿ ದ್ರವ್ಯಸಹಾಯ ಕಂಪೆನಿ ಮೆಂಬರುಗಳಾದ ನ್ಯಾನಾಚಾರಿ ವಗೈರೇರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೇಲ್ಕಂಡ ನ್ಯಾನಾಚಾರಿ ವಗೈರೇರು ಮೇಲ್ಕಂಡ ಕಂಪೆನಿ ಮೆಂಬರುಗಳಿಂದ ಕಾಲ್ಸ್ ಸರಿಯಾಗಿ ವಸೂಲು ಬರದೆ ಯಿರುವದರಿಂದ ಕಂಪೆನಿ ಅಭಿವೃದ್ಧಿಗೆ ಬರುವದಕ್ಕೂ ಕಂಪೆನಿ ಕೆಲಸಗಳು ನಡಿಯುವದಕ್ಕೂ ಅವಕಾಶ ವಿಲ್ಲವಾದ್ದರಿಂದ ಕಂಪೆನಿ ವೈಂಡಪ್ ಮಾಡಿಸಬೇಕೆಂದು ವಗೈರೇ ಅರ್ಜೀ ಕೊಟ್ಟು ಯಿಧಾರೆ, ಇದರ ವ್ಯವಸ್ಥೆ ಬಗ್ಯೆ ಸ್ನ 1890ನೇ ಇಸವಿ ಜುಲೈ ತಿಂಗಳು 15ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರು ಮಾಡಿಧೆ. ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಆಕ್ಷೇಪಣೆ ಯಿರತಕ್ಕ ವರೆಲ್ಲರೂ ಆವರೇ ಆಗಲಿ ಅವರುಗಳ ತರಫ ವೊಖ್ತ್ಯಾರಿ ಪಡದ ಅಡ್ವೊಕೇಟರಾಗಲಿ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಸಬಹುದು.

ತಾರೀಖು 24ನೇ ಜೂ್ನ 189ನೇ ಇಸವಿ.

1890ನೇ ಇಸವಿ ಅರ್ಜೀ ನಂಬರು 125.

ಮೃತಪಟ್ಟ ಗಂಗಾಧರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ಸಿದ್ದಪ್ಪನವರು, ಮೃತಪಟ್ಟ ಸದರೀ ಗಂಗಾಧರಪ್ಪನವರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಸಿದ್ದಪ್ಪನು ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಗಂಗಾಧರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 8000 ರೂಪಾಯಿ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಪ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಿದ್ದಪ್ಪನವರ ಅರ್ಜಿಯನ್ನು 1890ನೇ ಇಸವಿ ಜುಲೈ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗಂಗಾಧರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1890ನೇ ಇಸವಿ ಜೂ್ನ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟುವೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಹುಕುಂ ಬನೋಜೀಪ್,
ಎಸ್. ಹೇಮಾಜಿರಾವ್,
ರೆಜಿಸ್ಟ್ರಾರ್.

ಇನಾಂ ಇಲಾಖಾ.

ಇಸ್ಪಿ ಹಾರ್ನಾಮೆ.

ತಾರೀಖು 9ನೇ ಜೂ್ನ 1890.

ನಂ. (1)

ಇನಾಂದಾರ್ರಿಗೆ ಇದರಿಂದ ತಿಳಿಸುವದೇನಂದರೆ, ಕಡೂರು ತಾಲ್ಲೂಕಿನಲ್ಲಿ ಇರತಕ್ಕ ಚಿಲ್ಲರೆ ಇನಾಂಗಳ ಬಾಬತು (136) ಫೈನಲ್ ಟೈಟಲ್ ಡೀಡ್ಗಳ ಯಾನೆ ಕಾಯಂ ಪಟ್ಟೆಗಳು ಕಡೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳಿಸಲ್ಪಟ್ಟಿವೆ.

2. ಸದರೀ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್ ಬಂದ ಮೇಲೆ ಅವ್ವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್ದಾರರು ಅಂಥಾ ನೋಟಿಸ್ಗಳನ್ನ ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಕೊಡಲ್ಪಟ್ಟ ಪಟ್ಟೆಗಳು ರದ್ದುಮಾಡಲ್ಪಟ್ಟು ಇರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂ॥ ಆಫ ಇನಾಂ ಸೆಟಲ್ಮೆಂಟ್ಸ್.

ಫಾರೆಸ್ಟ್ಸ ಇಲಾಖಾ.

ತಾರೀಖು 12ನೇ ಜೂ್ನ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಾರ್ಕಳಕೋಟೆ ಬೇರಂಬಾಡಿ ಮತ್ತು ಆಯನೂರು ಮಾರಿಗುಡಿ ಫಾರೆಸ್ಟ್ಗಳಲ್ಲಿ ಸರ್ಕಾರಮೂಲಕ ಆನೇಶಿಕಾರಿ ಕೆಲಸಗಳು ನಡಿಯುವದರಿಂದ ಇನ್ನೊಂದು ನೋಟಿಸ್ ಕೊಡುವವರಿಗೂ ಸದರೀ ಜಂಗಲ್ಗಳಲ್ಲಿ ಯಾವ ವಿಧವಾದ ಶಿಕಾರಿಯೂ ನಿಷೇಧಿಸಲ್ಪಟ್ಟು ಯಿರುತ್ತೆ.

ಶಿಕಾರಿ ಬಗ್ಯೆ ಸದರೀ ಜಂಗಲ್ಗಳಿಗೆ ಪ್ರವೇಶಿಸುವ ಜನಗಳು ಪ್ರಾಸಿಕ್ಯೂಷನಿಗೆ ಬಳಪಡುವರು.